# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ ಃ 345/2017***

*ಚಾಸಾ ಃ 1*

*ಪ್ರಾಸಾ ಃ 1*

| | | |
|---|---|---|
| ಹೆಸರು | ಃ | ಬಿ ಜಿ ಕುಮಾರ್ |
| ತಂದೆಯ ಹೆಸರು | ಃ | ಗೋವಿಂದಶೆಟ್ಟಿ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಪೋಲಿಸ್ ನಿರೀಕ್ಷಕರು, ಶ್ರೀರಂಗಪಟ್ಟಣ |
| ವಾಸಸ್ಥಳ | ಃ | ಶ್ರೀರಂಗಪಟ್ಟಣ |

**ದಿನಾಂಕ ಃ *27-06-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಪಿಪಿ ವಕೀಲರಿಂದ ಃ-**

ನಾನು ದಿನಾಂಕ 11-08-2015 ರಿಂದ 15-10-2016 ರವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01-03-2016 ರಂದು ಮಧ್ಯಾಹ್ನ ಸುಮಾರು 12 ಗಂಟೆಗೆ ನಾನು ಠಾಣೆಯಲ್ಲಿರುವಾಗ ಬಾತ್ಮಿದಾರರೊಬ್ಬರು ದೂರವಾಣಿ ಕರೆ ಮಾಡಿ ಕೊಂಡಂಗೇರಿಯ ಎಲಿಯಂಗಾಡ್ ಎಂಬಲ್ಲಿ ಕಾವೇರಿ ಹೊಳೆಯಿಂದ ಅಕ್ರಮವಾಗಿ ಮರಳನ್ನು ತೆಗೆದು ಲಾರಿಗೆ ತುಂಬುತ್ತಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ನಾನು, ಚಾಸಾ5, 6 ಹಾಗೂ 8 ಹಾಗೂ ಪಂಚರಾದ ಚಾಸಾ2 ರಿಂದ 4 ರವರೊಂದಿಗೆ ಮಧ್ಯಾಹ್ನ ಸುಮಾರು 2 ಗಂಟೆಗೆ ಸದರಿ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಮಿನಿ ಲಾರಿಯು ನಿಂತಿರುವುದು ಕಂಡು ಬಂದಿದ್ದು, ಲಾರಿಯ ಬಳಿ ಹೋಗುತ್ತಿದ್ದಂತೆ ಅಲ್ಲಿರುವ ಲಾರಿಯ ಚಾಲಕನಾದ 1ನೇ ಆರೋಪಿಯನ್ನು ಹೊರತುಪಡಿಸಿ ಉಳಿದವರು ಓಡಿ ಹೋಗಿರುತ್ತಾರೆ. ನಂತರ 1ನೇ ಆರೋಪಿಯನ್ನು ವಿಚಾರಿಸಿ ಮರಳನ್ನು ತೆಗೆಯಲು ಹಾಗೂ ಸಾಗಿಸಲು ಪರವಾನಗಿ ಇದೆಯೇ ಎಂದು ಕೇಳಲಾಗಿ, ಆತ ಯಾವುದೇ ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ನಂತರ ಸ್ಥಳದಲ್ಲಿ ಪಂಚರಾದ ಚಾಸ-2 ರಿಂದ 4 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಕೃತ್ಯಕ್ಕೆ ಬಳಸಿದ ಲಾರಿ, ನಾಲ್ಕು ಕಬ್ಬಿಣದ ಕೊಪ್ಪರಗಿ, ಒಂದು

ಗುದ್ದಲಿ ಹಾಗೂ ಎರಡು ಪ್ಲಾಸ್ಟಿಕ್ ಕುಕ್ಕೆಗಳನ್ನು ಅಮಾನತ್ತುಪಡಿಸಿಕೊಂಡು, 1 ನೇ ಆರೋಪಿಯೊಂದಿಗೆ ಠಾಣೆಗೆ ಹಿಂತಿರುಗಿ, ಠಾಣೆಯಲ್ಲಿ ಸ್ವ ವರದಿಯನ್ನು ತಯಾರಿಸಿ, ಠಾಣಾ ಮೊ. ಸಂಖ್ಯೆ 83/2016 ರಂತೆ ಪ್ರ ವ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ ಹಾಗೂ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾ ಪ ಸಂಖ್ಯೆ 23/2016 ರಂತೆ ದಾಖಲಿಸಿಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ 1 ನೇ ಆರೋಪಿಯನ್ನು ದಸ್ತಗಿರಿ ಕ್ರಮ ಜರುಗಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ, ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ*1* ಎಂದು, ಸಾಕ್ಷಿಯ ಸಹಿಯನ್ನು ನಿಪಿ*1(ಎ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಈ ಪ್ರಕರಣದಲ್ಲಿ ತಯಾರಿದ ಸ್ವವರದಿ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ, ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಸ್ವವರದಿಯನ್ನು ನಿಪಿ*2* ಎಂದು, ಸಾಕ್ಷಿಯ ಸಹಿಯನ್ನು ನಿಪಿ*2(ಎ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಈ ಪ್ರಕರಣದ ದಾಖಲಿಸಿದ ಪ್ರ ವ ವರದಿ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ, ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಪ್ರ ವ ವರದಿಯನ್ನು ನಿಪಿ*3* ಎಂದು, ಸಾಕ್ಷಿಯ ಸಹಿಯನ್ನು ನಿಪಿ*3(ಎ)* ಎಂದು ಗುರುತಿಸಲಾಯಿತು. ನಂತರ ದಿನಾಂಕ ***03-03-2016*** ರಂದು ಚಾಸಾ ***2*** ರಿಂದ ***4*** ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ ***26-03-2016*** ರಂದು ***2*** ನೇ ಆರೋಪಿಯು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ಅವರ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡು ನಂತರ ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ದಿನಾಂಕ ***23-03-2016*** ರಂದು ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಕೆಎ ***12*** ಎ ***2190*** ನೋಂದಣಿ ಸಂಖ್ಯೆಯ ಈಚರ್ ಮಿನಿ ಲಾರಿಯನ್ನು ಅದರ ಮಾಲೀಕನಾದ ***2*** ನೇ ಆರೋಪಿಗೆ ಬಿಡುಗಡೆ ಮಾಡಲಾಯಿತು. ನಂತರ ದಿನಾಂಕ ***16-09-2016*** ರಂದು ***3*** ರಿಂದ ***5*** ನೇ ಆರೋಪಿಗಳನ್ನು ಪ್ರಕರಣದಲ್ಲಿ

ಸೇರಿಸಿಕೊಳ್ಳುವ ಸಲುವಾಗಿ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿದ್ದು, ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪ್ರಕರಣದಲ್ಲಿ ಸೇರಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು, ಸಾಕ್ಷಿಯು ಅದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ನಾಲ್ಕು ಕೊಬ್ಬರಿಗೆಗಳ ಫೋಟೋ ಎಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ*4* ಎಂದು ಗುರತಿಸಲಾಯಿತು. ಈ ಸಂದರ್ಭದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋ ಸಿಡಿ ಅಥವಾ ನೆಗೆಟಿವ್ ಹಾಜರುಪಡಿಸದ ಕಾರಣ ಸದರಿ ಫೋಟೋವನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ಫೋಟೋವನ್ನು ನಿಪಿ*4* ಎಂದು ಗುರುತಿಸಲಾಯಿತು. ನಂತರ ನನಗೆ ವರ್ಗಾವಣೆಯಾದ್ದರಿಂದ ಪ್ರಕರಣದ ಕಡತವನ್ನು ಚಾಸಾ-*11* ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎರಡು ಕುಕ್ಕೆ ಹಾಗೂ ಒಂದು ಗುದ್ದಲಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಎರಡು ಕುಕ್ಕೆಗಳನ್ನು ಮು ಮಾ *1* ಹಾಗೂ *2* ಎಂದು, ಗುದ್ದಲಿಯನ್ನು ಮು ಮಾ *3* ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ *1* ರಿಂದ *3* ಹಾಗೂ *5*ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**<u>ಪಾಟಿ ಸವಾಲುಃ</u> ಶ್ರೀ. ಎನ್ ಎಸ್ ಪಿ *1*ನೇ ಆರೋಪಿ ಪರ ವಕೀಲರಿಂದ ಃ**

ಚಾಸಾ5 ಹಾಗೂ 6 ರವರು ಅಕ್ರಮ ಮರಳು ಸಾಗಾಣಿಕೆ ತಡೆಯ ಕಮಿಟಿಯ ಸದಸ್ಯರು ಎಂದರೆ ಸರಿ. ನಾನು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿಲಾದ ಸ್ಥಳಕ್ಕೆ ಹೋಗಿರುವುದಿಲ್ಲ ಬದಲಾಗಿ ನಿಪಿ 1 ಮಹಜರನ್ನು ನಾನು ಠಾಣೆಯಲ್ಲೆ ಕುಳಿತು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ2 ರಿಂದ 4 ರವರು ಸ್ಥಳೀಯ ಸಾಕ್ಷಿದಾರರಲ್ಲ ಎಂದರೆ ಸರಿಯಲ್ಲ. ನಾವು ಕೃತ್ಯ ಸ್ಥಳಕ್ಕೆ ಹೋಗಿದ್ದೇವೆಂದು ಹೇಳಲಾದ ಜಂಕ್ಷನ್ ಬಳಿ ಸುಲೈಮಾನ್ ಎನ್ನುವವರಿಗೆ ಸೇರಿದ ಅಂಗಡಿ ಇದೆ ಎಂದರೆ ಸಾಕ್ಷಿ ಅಂಗಡಿ ಇರುವುದು ನಿಜ ಆದರೆ ಅದು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಪಕ್ಕದಲ್ಲಿ ಇಸ್ಮಾಯಿಲ್, ಆಯಮದ್ ಹಾಗೂ ಸಮದ್ ಎನ್ನುವವರ ಮನೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳದ ಸುಮಾರು ಮೀಟರ್ ಹಿಂದೆ ಹಲವಾರು ಮನೆ ಹಾಗೂ ಅಂಗಡಿ ಮುಂಗಟ್ಟುಗಳು ಇರುತ್ತವೆ ಎಂದರೆ ಸರಿ.

ಅಲ್ಲಿಯ ಯಾವುದೇ ವ್ಯಕ್ತಿಯನ್ನು ನಿಪಿ1 ಕ್ಕೆ ಪಂಚರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಚಾಸಾ-2 ರಿಂದ 4 ರವರು ಸಹ ಸ್ಥಳೀಯರೇ ಆಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಅಕ್ರಮ ಮರಳು ತೆಗೆಯುವ ಹಾಗೂ ಸಾಗಟ ಮಾಡುವ ಕೃತ್ಯ ಎಸಗದೆ ಇದ್ದರೂ ಸಹ ನಿಪಿ2 ರಂತೆ ಸುಳ್ಳು ವರದಿಯನ್ನು ಸೃಷ್ಟಿ ಮಾಡಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬಾತ್ಮಿದಾರರಿಂದ ಮಾಹಿತಿ ಬಂದಾಗ ನಾನು ಠಾಣೆಯಲ್ಲೇ ಇದ್ದಿರುತ್ತೇನೆ. ಆದರೆ ಆಗ ನಾನು ಪ್ರಕರಣ ದಾಖಲಿಸಿರುವುದಿಲ್ಲ. ಆಗ ಪ್ರಕರಣ ದಾಖಲಲಿಸಲು ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿಯು ದಾಳಿ ಮಾಡಿದ ನಂತರ ನಿಪಿ2 ರಂತೆ ಸ್ವ ವರದಿ ತಯಾರಿಸಿ ನಂತರ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಕೃತ್ಯ ಸ್ಥಳಕ್ಕೆ ಹೋಗಿರುವುದಿಲ್ಲ ಅಲ್ಲಿ ಆರೋಪಿಗಳು ಯಾವುದೇ ಕೃತ್ಯ ಎಸಗಿರುವುದಿಲ್ಲ ಹಾಗೂ ನಾನು ಅಲ್ಲಿ ಯಾವುದೇ ಮಹಜರ ಕ್ರಮ ಜರುಗಿಸಿ, ಮು ಮಾ 1 ರಿಂದ 3 ನ್ನಾಗಲಿ ಅಥವಾ ನಿಪಿ4 ರಲ್ಲಿ ಕಾಣಿಸಿದ ಕೊಪ್ಪರಗಿಯನ್ನಾಗಲಿ ಅಥವಾ ಲಾರಿಯನ್ನಾಗಲಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಬದಲಾಗಿ ಆರೋಪಿಗಳನ್ನು ಠಾಣೆಗೆ ಕರೆಸಿಕೊಂಡು ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿಕೊಂಡು ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು ಮಾಲು 1 ರಿಂದ 3 ಹಾಗೂ ನಿಪಿ 4 ರಲ್ಲಿ ಕಾಣಿಸಿರುವ ಕೊಪ್ಪರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಬದಲಾಗಿ ಅವುಗಳನ್ನು ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ5 ಹಾಗೂ 6 ರವರು ಅಕ್ರಮ ಮರಳು ಸಾಗಾಣಿಕೆ ತಡೆಯ ಕಮಿಟಿಯ ಸದಸ್ಯರಾದ್ದರಿಂದ ನಾನು ಅವರ ಜೊತೆ ಕೆಲಸ ಮಾಡುತ್ತಿದ್ದರಿಂದ ನಿಪಿ1 ಕ್ಕೆ ಕಛೇರಿಯಲ್ಲೆ ಅವರುಗಳ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಹಾಗೂ ಮು ಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ</u> 2, 3 ಹಾಗೂ 5 ನೇ ಆರೋಪಿ ಪರ ವಕೀಲರಿಂದ ಃ 2, 3 ಹಾಗೂ 5 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು 2, 3 ಹಾಗೂ 5 ನೇ ಆರೋಪಿಗಳ ಪರ ಅಳವಡಿಸಿಕೊಳ್ಳುವಂತೆ ಕೋರಿದ್ದು,

ಮನವಿಯನ್ನು ಪುರಸ್ಕರಿಸಿ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು 2, 3 ಹಾಗೂ 5 ನೇ ಆರೋಪಿಗಳ ಪರ ಅಳವಪಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.